ಸ್ಥಳಾಂತರಗೊಂಡಿರುವ ಗ್ರಾಮಗಳು

4101(4635); ಶ್ರೀ ಚಿಕ್ಕಮಾದು ಎಸ್

ಅ) ಮೈಸೂರು ಜಿಲ್ಲೆ ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ ಕಬಿನಿ ಜಲಾಶಯ ನಿರ್ಮಾಣ ಕಾಮಗಾರಿ 1962 ರಲ್ಲಿ ಪ್ರಾರಂಭವಾಗಿ 1974 ರಲ್ಲಿ ಪೂರ್ಣಗೊಂಡಿದ್ದು, ಈ ಸಂದರ್ಭದಲ್ಲಿ ಜಲಾಶಯ ವ್ಯಾಪ್ತಿಗೆ ಒಳಪಡುವ 22 ಗ್ರಾಮಗಳನ್ನು ಸ್ಥಳಾಂತರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸ್ಥಳಾಂತರಗೊಂಡಿರುವ ಗ್ರಾಮಗಳಲ್ಲಿ ಬಹುತೇಕ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ಜನರುಗಳೇ ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸ್ಥಳಾಂತರಗೊಂಡಿರುವ ಗ್ರಾಮಗಳಲ್ಲಿ ಯಾವುದೇ ರೀತಿಯ ಮೂಲಭೂತ ಸೌಕರ್ಯ ಒದಗಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು;

ಈ) ಹಾಗಿದ್ದಲ್ಲಿ, ಸ್ಥಳಾಂತರಗೊಂಡಿರುವ ಗ್ರಾಮಗಳ ಜನರುಗಳಿಗೆ ಮೂಲಭೂತ ಸೌಕರ್ಯ ಯಾವಾಗ ಒದಗಿಸಲಾಗುವುದು; (ವಾಸದ ಮನೆ, ರಸ್ತೆ, ಕುಡಿಯುವ ನೀರು, ಚರಂಡಿ ಕಾಮಗಾರಿ, ವಿದ್ಯುತ್ ವ್ಯವಸ್ಥೆ ಪೂರ್ಣ ವಿವರ ನೀಡುವುದು)?

ಶ್ರೀ ಎಂ.ಬಿ. ಪಾಟೀಲ್ (ಜಲಸಂಪನ್ಮೂಲ ಸಚಿವರು)

ಅ) ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ ಕಬಿನಿ ಜಲಾಶಯ ನಿರ್ಮಾಣ ಕಾಮಗಾರಿ 1954ರಲ್ಲಿ ಪ್ರಾರಂಭವಾಗಿ 1973ರಲ್ಲಿ ಪೂರ್ಣಗೊಂಡಿರುತ್ತದೆ. ಈ ಸಂದರ್ಭದಲ್ಲಿ ಜಲಾಶಯ ವ್ಯಾಪ್ತಿಯಲ್ಲಿರುವ 22 ಗ್ರಾಮಗಳ ಮತ್ತು 14 hamlets ಗಳಲ್ಲಿನ ಜನರನ್ನು 25 ಪುನರ್ವಸತಿ ಕಾಲೋನಿಗಳಲ್ಲಿ ಪುನರ್ವಸತಿಗೊಳಿಸಿರುವುದು

ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ವಿವರಗಳನ್ನು **ಅನುಬಂಧ–1** ರಲ್ಲಿ ಲಗತ್ತಿಸಿದೆ.

ಆ) ಗಮನಕ್ಕೆ ಬಂದಿರುತ್ತದೆ.

ಇ) ಮತ್ತು ಈ) ಸ್ಥಳಾಂತರಗೊಂಡ ಗ್ರಾಮಗಳಿಗೆ ಮೂಲಭೂತ ಸೌಕರ್ಯಗಳಾದ ರಸ್ತೆಗಳು, ಕುಡಿಯುವ ನೀರು, ಶಾಲೆಗಳು, ಪಂಚಾಯತ್ ಕಟ್ಟಡಗಳು, ದೇವಸ್ಥಾನಗಳನ್ನು ಕಲ್ಪಿಸಲಾಗಿರುತ್ತದೆ ಇವುಗಳ ಜೊತೆಗೆ ಪ್ರಾಥಮಿಕ ಆರೋಗ್ಯ ಘಟಕಗಳ ಕಟ್ಟಡ ಹಾಗೂ ವಸತಿಗೃಹಗಳು, ಸ್ಮಶಾನಗಳು, ಕಾಲೋನಿ ರಸ್ತೆಗಳು, ಮುಳುಗಡೆಯಿಂದ ನಿರಾಶ್ರಿತರಾದವರಿಗೆ ನಿವೇಶನಗಳನ್ನು ಹಾಗೂ ವ್ಯವಸಾಯಕ್ಕಾಗಿ ಭೂಮಿಯನ್ನು ಮಂಜೂರು ಮಾಡಲಾಗಿದೆ. ನಂತರ ಈ ಮೂಲಭೂತ ಸೌಕರ್ಯಗಳನ್ನು ಗ್ರಾಮಪಂಚಾಯಿತಿ ವತಿಯಿಂದ ನಿರ್ವಹಣೆ ಮಾಡಲಾಗುತ್ತಿದೆ. ಪ್ರಸ್ತುತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ವಾಸಿಸುವ ಗ್ರಾಮಗಳಲ್ಲಿ ಗಿರಿಜನ ಉಪಯೋಜನೆ ಅಡಿಯಲ್ಲಿ (TSP) 2012–13 ನೇ ಸಾಲಿಗೆ 4 ಗ್ರಾಮಗಳಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಿಸುವ ₹ 50.00 ಲಕ್ಷ ಮೊತ್ತದ 4 ಕಾಮಗಾರಿಗಳನ್ನು ಕಾವೇರಿ ನೀರಾವರಿ ನಿಗಮದಿಂದ ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ. 2013–14ನೇ ಸಾಲಿಗೆ ಕಾವೇರಿ ನೀರಾವರಿ ನಿಗಮದಿಂದ ವಿಶೇಷ ಘಟಕ ಯೋಜನೆ (SCP) ಹಾಗೂ ಗಿರಿಜನ ಉಪಯೋಜನೆ (TSP) ಅನುದಾನದಡಿಯಲ್ಲಿ 3 ಗ್ರಾಮಗಳಲ್ಲಿ 3 ಕಾಮಗಾರಿಗಳಿಗೆ ₹ 128.50 ಲಕ್ಷಗಳು ಮಂಜೂರಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಮತ್ತು 2014–15ನೇ ಸಾಲಿಗೆ 12 ಗ್ರಾಮಗಳ ಕಾಲೋನಿಗಳಲ್ಲಿ ಕಾವೇರಿ ನೀರಾವರಿ ನಿಗಮದಿಂದ ₹ 382.00 ಲಕ್ಷ ಅಂದಾಜು ಮೊತ್ತದ 12 ಕಾಮಗಾರಿಗಳನ್ನು ಕೈಗೊಳ್ಳಲು ಯೋಜಿಸಲಾಗಿದೆ. (ವಿವರಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಲಾಗಿದೆ).

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ. ಚಿಕ್ಕಮಾದು .ಎಸ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 4635 ಕ್ಕೆ ಅನುಬಂಧ - 1

ಸ್ಥಳಾಂತರಗೊಂಡಿರುವ ಗ್ರಾಮಗಳ ವಿವರಗಳು.

ಕ್ರಮ ಸಂಖ್ಯೆ	ಗ್ರಾಮಗಳು	ಕ್ರಮ ಸಂಖ್ಯೆ	Hamlets ಗಳು	ಪುನರ್ವಸತಿ ಕಲ್ಪಿಸುವ ಕಾಲೋನಿಗಳು
1	ಬೀಚನಹಳ್ಳಿ	1	ನೀಲಗೌಡನಮಂಡಿ	ರಾಮನಹಳ್ಳಿ ಕಾಲೋನಿ
2	ಸಿಂಗಪಟ್ಟಣ	2	ಸೋಮುದೇವರಮಂಡಿ	ಬಳ್ಳಗಹಳ್ಳಿ ಕಾಲೋನಿ
3	ಬಿದರಹಳ್ಳಿ	3	ಕತ್ತೂರುಮಂಡಿ	ಹೊಸಹುರೇಹಳ್ಳಿ ಕಾಲೋನಿ
4	ಕತ್ತೂರು	4	ನಾಗೇಗೌಡನಮಂಡಿ	ಹೊಸಸೋಗಹಳ್ಳಿ ಕಾಲೋನಿ
5	ಅಯ್ಯಂಬಳ್ಳಿ	5	ಗುರುಕರಮಂಡಿ	ಮಗ್ಗೆ ಮತ್ತು ಕೆ.ಆರ್.ಪುರ ಜಂಟಿ
6	ಜಗನಹೋಟೆ	6	ಸೇಕ್ಕರಮಂಡಿ	ಹೊಸ ಜೇಯಾರ ಕಾಲೋನಿ
7	ಪುರ	7	ಮರಿಗೌಡನಮಂಡಿ	ಹೊಸ ಬೆಳಕೂರು ಕಾಲೋನಿ
8	ಸೋಗಹಳ್ಳಿ	8	ಚುಟ್ಟುರುಮಂಡಿ	ಹೊಸ ನಿಷ್ಟೇವಿ ಕಾಲೋನಿ
9	ಕೆ.ಆರ್.ಪುರ	9	ಹೊಸಹೊಳಲುಮಂಡಿ	ಹೊಸ ಮಳಲಿ ಕಾಲೋನಿ
10.	ಮಗ್ಗೆ	10	ಬಿದರಹಳ್ಳಿಮಂಡಿ	ಹೊಸ ಗುಂಡಹಳ್ಳಿ ಕಾಲೋನಿ
11	ಜೇಯಾರ	11	ಕಂಪೆಗೌಡನಮಂಡಿ	ಹೊಸ ಹುರೇಹಳ್ಳಿ ಬಿ ಕಾಲೋನಿ
12	ಕನಕವಳ್ಳಿ	12	ಗೋಪಗೌಡನಮಂಡಿ	ಹೊಸ ನಿಷ್ಟೇ-ಬಿ ಕಾಲೋನಿ

13	ಭೀಮನಕೊಳ್ಳಿ	13	ಯರೇರಹುಂಡಿ	ಹೊಸ ಹಗ್ಗೂರು ಕಾಲೋನಿ
14	ದಳಕ್ಕೂರು	14	ಆನಗೆರೆ	ಬಿದರಳ್ಳಿ ಕಾಲೋನಿ
15	ಬೀರಂಬಳ್ಳಿ			ಹೊಸ ಬೀರಂಬಳ್ಳಿ ಕಾಲೋನಿ
16	ಮಳಲಿ			ಬಸವಪುರಕಮಳ ಕಾಲೋನಿ
17	ನಿಷ್ಣ			ಶರಣಮಟ್ಟ ಕಾಲೋನಿ
18	ಮೂಲಹೊಸಹಳ್ಳಿ			ನಂಜನಾಥಪುರ ಕಾಲೋನಿ
19	ಬೇಗೂರು			ಶಿವಗ್ಗುಮಸಹಳ್ಳಿ ಕಾಲೋನಿ
20	ಗುಂಡತ್ತೂರು			ಹೊಸ ಬೇಗೂರು ಕಾಲೋನಿ
21	ಹೊಸಹೊಳಲು			ಕಂಜಿಸಹಳ್ಳಿ ಎ ಕಾಲೋನಿ
22	ಕಾರಮರ			ಕಂಜಿನಹಳ್ಳಿ ಬಿ ಕಾಲೋನಿ
23				ದೂರದೇವರಮಟ್ಟ ಕಾಲೋನಿ
24				ಜಕ್ಕಹಳ್ಳಿ ಕಾಲೋನಿ (ಜಾಮಯ್ಯನಹಟ್ಟಿ)
25				ಕಳಸೂರು ಕಾಲೋನಿ

(ಎನ್.ಆರ್.ವಿಜಯಶಾರದಿ).
ವಿಶೇಷ ಕರ್ತವ್ಯಾಧಿಕಾರಿ(ತಾಂತ್ರಿಕ, ಎಂಎಂಪಿ-3),
ಜಲ ಸಂಪನ್ಮೂಲ ಇಲಾಖೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ. ಚಿಕ್ಕಮಾದು .ಎಸ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 4635 ಕ್ಕೆ ಅನುಬಂಧ-೨

Details of SCP-TSP works in rehabilitation villages of Kabini Reservoir Division.

Sl no	Year	Total No of works	No of SCP Works	No of TSP Works	Name of villages	Est cost in lakhs	SCP/TSP	Status
1	2012-13	4	0	4	Nerale hosur	15.00	TSP	Completed
2					Hoskeresunda	7.00	TSP	
3					Mosarahalla	18.00	TSP	
4					Taranimanti	10.00	TSP	
5	2013-14	3	1	2	Kanchanahalli	78.00	SCP	Under Progress
6					Bazapura	88.50	TSP	
7					Rameshalli	40.00	TSP	
8	2014-15	12	7	5	Nanjanathpura	95.00	SCP	To be included in AWP 2014-15
9					Uyyamballi	80.00	SCP	
10					Heggonur	80.00	SCP	
11					Boredevaramanti	50.00	SCP	
12					Kalsoor	60.00	SCP	
13					N.Begur	80.00	SCP	
14					(balance Length)	95.00	SCP	
15					Hoskeresunda	15.00	TSP	
16					Bidarahally	112.00	TSP	
17					(Length)	200.00	TSP	
18					N..Begur	30.00	TSP	
19					Birambally	25.00	TSP	

(ಎಸ್.ಆರ್.ವಿಜಯಸಾರಥಿ)
ವಿಶೇಷ ಕರ್ತವ್ಯಾಧಿಕಾರಿ(ತಾಂತ್ರಿಕ, ಎಂವಿಐಪಿ-3),
ಜಲ ಸಂಪನ್ಮೂಲ ಇಲಾಖೆ.